**ಕರ್ನಾಟಕ ಸರ್ಕಾರ**

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:35:EMIS:ಸುತ್ತೋಲೆ:2020-21:ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:20-02-2021.

## ಸುತ್ತೋಲೆ

ವಿಷಯ: 2020-21 ನೇ ಸಾಲಿನ ವರ್ಗಾವಣೆ ಸಂಬಂಧ ಕಾಲೇಜಿನ Zone History ಮತ್ತು ಬೋಧಕರ Service History ವಿವರಗಳನ್ನು ಇಎಂಐಎಸ್ ತಂತ್ರಾಂಶದಲ್ಲಿ Update ಮಾಡುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ಸಂಖ್ಯೆ: ದಿನಾಂಕ:12-02-2021

*******

ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕರ ವರ್ಗಾವಣೆಗೆ ಸಂಬಂಧಿಸಿದಂತೆ, ಹೊಸದಾಗಿ ವರ್ಗಾವಣೆ ನಿಯಮಗಳನ್ನು ರೂಪಿಸಲಾಗಿದ್ದು, ಸದರಿ ನಿಯಮಗಳನ್ವಯ ವರ್ಗಾವಣೆ ಪ್ರಕ್ರಿಯೆಯನ್ನು ಕೈಗೊಳ್ಳಬೇಕಿರುವುದರಿಂದ ಅದೀನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ **College Zone History** ಹಾಗೂ ಬೋಧಕರ **Service History** ಅನ್ನು Update ಮಾಡಲು ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು. ಈ ಸಂಬಂಧ ಹಲವು ಕಾಲೇಜುಗಳಲ್ಲಿ **College Zone History** ಅನ್ನು **Update** ಮಾಡಿರುವುದನ್ನು ಪರಿಶೀಲಿಸಲಾಗಿ ಹಲವು ನ್ಯೂನತೆಗಳನ್ನು ಗಮನಿಸಲಾಗಿದೆ. ಆದ್ದರಿಂದ ಕೆಳಕಂಡ ಅಂಶಗಳನ್ನು ಗಮನಿಸಿ ತುರ್ತಾಗಿ **Update** ಮಾಡುವಂತೆ ಸೂಚಿಸಲಾಗಿದೆ.

1. ಬೆಂಗಳೂರಿನ ಹಲವು ಕಾಲೇಜುಗಳಲ್ಲಿ ಆ ಪ್ರದೇಶವು ಬಿ.ಬಿ.ಎಂ.ಪಿ ಗೆ ಒಳಪಟ್ಟ ದಿನಾಂಕವನ್ನು ಸರಿಯಾಗಿ ನಮೂದಿಸದೇ ಇರುವುದನ್ನು ಗಮನಿಸಲಾಗಿದೆ. ಆದ್ದರಿಂದ ಬಿ.ಬಿ.ಎಂ.ಪಿ ವ್ಯಾಪ್ತಿಗೆ ಒಳಪಟ್ಟ ದಿನಾಂಕವನ್ನು ಖಚಿತವಾಗಿ ನಮೂದಿಸುವುದು.
2. ವಲಯಗಳ ವರ್ಗೀಕರಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕ ವ್ಯಾಪ್ತಿಯ ಪ್ರದೇಶಗಳು 'ಎ' ವಲಯ, ಬಿ.ಡಿ.ಎ ವ್ಯಾಪ್ತಿ ಮತ್ತು ಮಹಾನಗರ ಪಾಲಿಕೆಗಳು 'ಬಿ' ವಲಯ, ನಗರಸಭೆಗಳು ಮತ್ತು ಜಿಲ್ಲಾ ಕೇಂದ್ರಗಳ ವ್ಯಾಪ್ತಿ 'ಸಿ' ವಲಯ, ಪುರಸಭೆಗಳು ಮತ್ತು ತಾಲ್ಲೂಕು ಕೇಂದ್ರಗಳ ವ್ಯಾಪ್ತಿ 'ಡಿ' ವಲಯ ಹಾಗೂ ಉಳಿದ ಪ್ರದೇಶಗಳು 'ಇ' ವಲಯವೆಂದು ವರ್ಗೀಕರಿಸಲಾಗಿದೆ. ಆದರೆ ಬಹುತೇಕ ಕಾಲೇಜುಗಳಲ್ಲಿ ವಲಯ ವರ್ಗೀಕರಣವನ್ನು ತಪ್ಪಾಗಿ ಅರ್ಥೈಸಿಕೊಂಡು **College Zone History** ನಮೂದಿಸುತ್ತಿರುವುದು ಗಮನಿಸಲಾಗಿದೆ.
    - ಬೆಂಗಳೂರಿನ ನಗರದ ಕಾಲೇಜುಗಳು ಜಿಲ್ಲಾಕೇಂದ್ರ, ಬಿ.ಡಿ.ಎ. ವ್ಯಾಪ್ತಿ ಮತ್ತು ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಒಳಪಡುತ್ತಿದ್ದರೂ ಬಿ.ಬಿ.ಎಂ.ಪಿ.ವ್ಯಾಪ್ತಿಯ ಪ್ರದೇಶಗಳೆಂದು ಪರಿಗಣಿಸಿ ದಿನಾಂಕಗಳನ್ನು ನಮೂದಿಸಿಸುವುದು.
    - ಜಿಲ್ಲಾ ಕೇಂದ್ರಗಳಾಗಿದ್ದು ಮಹಾ ನಗರಪಾಲಿಕೆಗಳ ವ್ಯಾಪ್ತಿಯಲ್ಲಿದ್ದಲ್ಲಿ ಮಹಾನಗರಪಾಲಿಕೆ ಪ್ರದೇಶಗಳೆಂದು ಪರಿಗಣಿಸಿ ದಿನಾಂಕಗಳನ್ನು ನಮೂದಿಸುವುದು.

      **ಉದಾ:** ಮೈಸೂರು/ಬೆಳಗಾವಿ/ತುಮಕೂರು/ಹುಬ್ಬಳ್ಳಿ-ಧಾರವಾಡ/ದಾವಣಗೆರೆ/ಬಳ್ಳಾರಿ ... ಜಿಲ್ಲಾ ಕೇಂದ್ರವಾಗಿದ್ದರೂ ಮಹಾ ನಗರಪಾಲಿಕೆ ವ್ಯಾಪ್ತಿಯಲ್ಲಿರುತ್ತದೆ.

- ತಾಲ್ಲೂಕು ಕೇಂದ್ರಗಳಲ್ಲಿ ನಗರಸಭೆ ಇದ್ದಲ್ಲಿ ನಗರಸಭೆ ವ್ಯಾಪ್ತಿಯೆಂದು ಪರಿಗಣಿಸಿ ದಿನಾಂಕಗಳನ್ನು ನಮೂದಿಸುವುದು.

  ಉದಾ: ಇಳಕಲ್/ರಬಕವಿ-ಬನಹಟ್ಟಿ/ಶಿಡ್ಲಘಟ್ಟ/ದೊಡ್ಡಬಳ್ಳಾಪುರ/ಸಿರಾ/ತಿಪಟೂರು ತಾಲ್ಲೂಕು ಕೇಂದ್ರವಾಗಿದ್ದರೂ ನಗರಸಭೆವ್ಯಾಪ್ತಿಯಲ್ಲಿರುತ್ತದೆ.

- ತಾಲ್ಲೂಕು ಕೇಂದ್ರಗಳಲ್ಲದ ಪ್ರದೇಶಗಳು ನಗರಸಭೆ/ಪುರಸಭೆವ್ಯಾಪ್ತಿಯಲ್ಲಿದ್ದಲ್ಲಿ ನಗರಸಭೆ/ಪುರಸಭೆಯೆಂದು ಪರಿಗಣಿಸಿ ದಿನಾಂಕಗಳನ್ನು ನಮೂದಿಸುವುದು.

  ಉದಾ: ರಾಯಭಾಗ್ ತಾಲ್ಲೂಕಿನ ಹಾರೂಗೇರಿ ಹಾಗೂ ಲಿಂಗಸಗೂರು ತಾಲ್ಲೂಕಿನ ಮುದಗಲ್ ಪುರಸಭೆ ವ್ಯಾಪ್ತಿಯಲ್ಲಿದ್ದು, ಪುರಸಭೆ ಎಂದು ಪರಿಗಣಿಸಿ ದಿನಾಂಕಗಳನ್ನು ನಮೂದಿಸುವುದು

ಕಾಲೇಜು ಪ್ರಾರಂಭವಾದ ದಿನಾಂಕದಿಂದ ಆ ಪ್ರದೇಶವು ಹಂತ ಹಂತವಾಗಿ ಮೇಲ್ದರ್ಜೆಗೇರಿದ ದಿನಾಂಕಗಳ ಮಾಹಿತಿಯನ್ನು ಆ ಪ್ರದೇಶದಲ್ಲಿರುವ ಮಹಾನಗರಪಾಲಿಕೆ/ನಗರಸಭೆ/ ಪುರಸಭೆ/ತಾಲ್ಲೂಕುಕಛೇರಿಯಿಂದ ಪಡೆದು ಖಚಿತ ದಿನಾಂಕಗಳನ್ನು **College Zone History** ಯಲ್ಲಿ ನಮೂದಿಸುವಂತೆ ಸೂಚಿಸಿದೆ.

ಮುಂದುವರೆಯುತ್ತಾ, ಬೋಧಕರ **Service History** ಅನ್ನು ಸಂಬಂಧಿಸಿದ ಪ್ರಾಂಶುಪಾಲರು **Approve** ಮಾಡದಿರುವುದನ್ನು ಮತ್ತು ಹಲವು ಬೋಧಕರು **Service History** ಅನ್ನು **Update** ಮಾಡದಿರುವುದನ್ನು ಗಮನಿಸಲಾಗಿದೆ. ಕೂಡಲೇ ಪ್ರಾಂಶುಪಾಲರು ಬೋಧಕರ **Service History** ಅನ್ನು ಪರಿಶೀಲಿಸಿ **Approve** ಮಾಡುವಂತೆ ಹಾಗೂ **Service History** ಅನ್ನು **Update** ಮಾಡದಿರುವ ಬೋಧಕರು ಕೂಡಲೆ **Update** ಮಾಡುವಂತೆ ಸೂಚಿಸಿದೆ.

ಈ ವಿಷಯವನ್ನು ಅತ್ಯಂತ ತುರ್ತು ಎಂದು ಭಾವಿಸಿ **ದಿನಾಂಕ:23-02-2021ರ** ಒಳಗಾಗಿ ಅಗತ್ಯ ವಿವರಗಳನ್ನು ಕಡ್ಡಾಯವಾಗಿ **update** ಮಾಡುವಂತೆ ಸೂಚಿಸಿದೆ ಹಾಗೂ **College Zone History** ಮತ್ತು ಬೋಧಕರ **Service History** ಅಪ್‌ಲೋಡ್ ಮಾಡಿರುವ ಮಾಹಿತಿಗಳಲ್ಲಿ ಯಾವುದೇ ರೀತಿಯ ತಪ್ಪುಗಳು ಕಂಡು ಬಂದಲ್ಲಿ ಹಾಗೂ ಅಸಂಗತ ಮಾಹಿತಿಗಳನ್ನು **Upload** ಮಾಡಿದಲ್ಲಿ ಸಂಬಂಧಿಸಿದವರನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಿ, ಶಿಸ್ತುಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

22/2/21

**ಮುಖ್ಯ ಆಡಳಿತಾಧಿಕಾರಿಗಳು**
ಕಾಲೇಜು ಶಿಕ್ಷಣ ಇಲಾಖೆ

**ಇವರಿಗೆ:**

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ-ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
4. ಹೆಚ್ಚುವರಿ ಪ್ರತಿ.
5. ಕಛೇರಿ ಪ್ರತಿ.

*DCE 06 Circular*